## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 361/2016**

ಚಾ.ಸಾ. 50

ಪ್ರಾ.ಸಾ. 33

| | | |
|---|---|---|
| ಸಾಕ್ಷಿದಾರರ ಹೆಸರು | – | ಶಮೀನಾ ಅಂಜುಮ್ |
| ತಂದೆಯ ಹೆಸರು | – | ಅಬ್ದುಲ್ ಶೇಖ್ |
| ವಯಸ್ಸು | – | 47 ವರ್ಷ |
| ಉದ್ಯೋಗ | – | ಗೃಹಿಣಿ |
| ವಾಸ್ತವ್ಯ | – | ಶಿರಸಿ |

(ಇಂದು ದಿನಾಂಕಃ 25–11–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ಆರೋಪಿತರ ಪರಿಚಯ ಇಲ್ಲ. ಆರೋಪಿತರು ನನ್ನಿಂದ ಯಾವುದೇ ಹಣವನ್ನು ಪಡೆದಿಲ್ಲ. ಟಿ.ಸಿ.ಹೆಚ್. ಸೀಟಿಗಾಗಿ ನಾನು ಆರೋಪಿತರನ್ನು ಭೆಟ್ಟಿಯಾಗಿಲ್ಲ ಮತ್ತು ಯಾವುದೇ ಹಣವನ್ನು ನೀಡಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

2001 ನೇ ಸಾಲಿನಲ್ಲಿ 2 ನೇ ಆರೋಪಿ ತನ್ನೊಂದಿಗೆ ಇನ್ನುಳಿದ ಆರೋಪಿತರೊಂದಿಗೆ ನನಗೆ ಟಿ.ಸಿ.ಹೆಚ್. ಸೀಟ್ ಕೊಡಿಸುತ್ತೇನೆಂದು ಅದಕ್ಕೆ ರೂ. 30,000–00 ದಿಂದ 40,000–00 ಖರ್ಚು ಬರುತ್ತದೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಾನು ಅವರ ಕೋರಿಕೆಯಂತೆ ಟಿ.ಸಿ.ಹೆಚ್. ಸೀಟಿಗಾಗಿ ನನ್ನ ತಾಯಿಯಿಂದ ರೂ. 19,000–00 ಗಳನ್ನು ಆರೋಪಿತರು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನನ್ನ ಶಾಲಾ ದಾಖಲಾತಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಮರಳಿ ಹಣವನ್ನೂ ನೀಡದೇ, ಟಿ.ಸಿ.ಹೆಚ್. ಸೀಟನ್ನೂ ಕೊಡಿಸದೇ ನನಗೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದಿನಾಂಕಃ 25–06–2002 ರಂದು ನಾನು ಮೇಲೆ

ನಮೂದಿಸಿದ ------------ ಅಂತ ತಿಳಿಯಿತು ಎಂದು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ. 37 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ.ವಿ.ಜಿ. ವಕೀಲರಿಂದಃ**

ಏನೂ ಇಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ